Telefax:0091-080-23330984
Email.registrar@uasbangalore.edu.in
Mob:9449866901

Phone:91-080-23330984
23330153 Extn.205/210

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಕುಲಸಚಿವರ ಕಛೇರಿ, ಜಿ.ಕೆ.ವಿ.ಕೆ., ಬೆಂಗಳೂರು – 560 065.


ಸಂಖ್ಯೆ.ಕು/ಸಕುಸ/ಹಿಸ-1/ಕೃಕೋ/2020-2021

ದಿನಾಂಕ: 10-08-2020

# ಅಧಿಸೂಚನೆ

## ಕರ್ನಾಟಕ ಕೃಷಿ/ ತೋಟಗಾರಿಕೆ / ಪಶು ಸಂಗೋಪನೆ ವಿಶ್ವ ವಿದ್ಯಾಲಯಗಳು
## 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಕೃಷಿಕರ ಕೋಟಾದಡಿಯಲ್ಲಿ ಪ್ರವೇಶಾತಿ ಸಂಬಂಧ ದಾಖಲಾತಿಗಳ ಪರಿಶೀಲನೆ

ಪ್ರಸ್ತುತ ರಾಜ್ಯ ವ್ಯಾಪಿ ಕೋವಿಡ್-19 ಕಾರಣವಾಗಿ, ಪ್ರಸಕ್ತ 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಕೃಷಿಕರ ಕೋಟಾದಡಿಯಲ್ಲಿ ಪ್ರವೇಶಾತಿ ಸಂಬಂಧ ಅಭ್ಯರ್ಥಿಗಳು ಸಲ್ಲಿಸುವ ದಾಖಲಾತಿಗಳನ್ನು ಭೌತಿಕವಾಗಿ ಪರಿಶೀಲಿಸುವ ಬದಲಾಗಿ, ಆನ್‌ಲೈನ್ ಪರಿಶೀಲನೆ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸುವಾಗ ಯಾವ ಕೇಂದ್ರದಲ್ಲಿ ದಾಖಲಾತಿ ಪರಿಶೀಲನೆಗೆ ಆಯ್ಕೆ ಕಾಣಿಸಿರುವರೊ, ಅದೇ ಕೇಂದ್ರದಲ್ಲಿ ಸಂಬಂಧಿತ ವಿಶ್ವವಿದ್ಯಾನಿಲಯಗಳಿಂದ ನಿಯೋಜಿಸಿದ ಸಮಿತಿ ಪರಿಶೀಲನೆ ಮಾಡುತ್ತದೆ.

## ಆನ್‌ಲೈನ್ ಪರಿಶೀಲನೆಗಾಗಿ ದಾಖಲೆಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಮಾರ್ಗಸೂಚಿಗಳು

1. ಆನ್‌ಲೈನ್ ಪರಶೀಲನೆಗೆ ಸಲ್ಲಿಸಬೇಕಾದ ಮೂಲದಾಖಲಾತಿಗಳು

   ಅ) CET ಪರೀಕ್ಷಾ ಪ್ರವೇಶ ಪತ್ರ (admission Ticket)

   ಆ) ವ್ಯವಸಾಯಗಾರರ ಪ್ರಮಾಣ ಪತ್ರ – 3 (ಅವಿಭಾಜ್ಯ ಕುಟುಂಬವಾದಲ್ಲಿ ಕಂದಾಯ ಇಲಾಖೆಯಿಂದ ಒದಗಿಸುವ ವಂಶವೃಕ್ಷ ಪ್ರಮಾಣ ಪತ್ರ)

   ಇ) ವ್ಯವಸಾಯದ / ಕೃಷಿ ಆದಾಯದ ಪ್ರಮಾಣ ಪತ್ರ

   ಈ) ವೇತನ ದೃಢೀಕರಣ ಪ್ರಮಾಣ ಪತ್ರ – 4 (ಜೊತೆಗೆ ನೌಕರಿಯಿದ್ದಲ್ಲಿ)

   ಉ) ಖಾಸಗಿ ವೃತ್ತಿಯಿಂದ ಆದಾಯದ ಪತ್ರ – 5 (ಜೊತೆಗೆ ಸ್ವಂತ ವ್ಯವಹಾರವಿದ್ದಲ್ಲಿ)

   ಊ) ಅಫಿಡವಿಟ್ (ಕೇವಲ 1ಸಿ, 1ಡಿ & 1ಇ ಒಟ್ಟು ಆದಾಯಕ್ಕೆ ಸಂಬಂಧಿಸಿದಂತೆ ಮಾತ್ರ. First party will be candidate & second party will be respective Universities)

   ಈ ಮೇಲಿನ ದಾಖಲಾತಿಗಳನ್ನು ಎಲ್ಲಾ ವಿಶ್ವವಿದ್ಯಾನಿಲಯಗಳ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜಾಲತಾಣಗಳಲ್ಲಿ ಕಾಣಿಸಿರುವ ಕೊಂಡಿಗಳಲ್ಲಿ ಲಾಗ್ಇನ್ ಮಾಡಿ ಸಲ್ಲಿಸಬಹುದು.

2. ಅಭ್ಯರ್ಥಿಗಳು ಅನ್‌ಲೈನ್ ಪರಿಶೀಲನೆಗೆ ಸಲ್ಲಿಸಬೇಕಾದ ಶುಲ್ಕ ರೂ.200/- ಸಾಮಾನ್ಯ ಮತ್ತು ಇತರೆ (ರೂ. 100/- ಪ.ಜಾ/ಪ.ಪ/ಪ್ರವರ್ಗ-1) ವನ್ನು ಜಾಲತಾಣದಲ್ಲಿ ನೀಡಿರುವ ಆನ್‌ಲೈನ್ ಸೌಲಭ್ಯ ಮೂಲಕ ತುಂಬಬಹುದು. ಶುಲ್ಕ ತುಂಬಿದ ನಂತರವೇ ಶುಲ್ಕ ರಸೀತಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿದ ಮಾಹಿತಿಯನ್ನು ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯ. ಶುಲ್ಕ ತುಂಬದೇ ಇದ್ದ ಪಕ್ಷದಲ್ಲಿ, ಸಮಿತಿಗೆ ದಾಖಲಾತಿಗಳ ಪರಿಶೀಲನೆ ಸಾಧ್ಯವಾಗುವುದಿಲ್ಲ.

## ಆನ್‌ಲೈನ್ ಪರಿಶೀಲನೆ ಪ್ರಕ್ರಿಯೆಯ ವೇಳಾಪಟ್ಟಿ

1. ಅಭ್ಯರ್ಥಿಗಳು ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವುದು – **ದಿನಾಂಕ: 11-08-2020 (ಮಧ್ಯಾಹ್ನ. 2.00 ಗಂಟೆಯ ನಂತರ) ರಿಂದ ದಿನಾಂಕ: 18-08-2020 ರ (ಮಧ್ಯ ರಾತ್ರಿ 12.00 ಗಂಟೆ)ವರೆಗೆ.**
2. ಆನ್‌ಲೈನ್ ನಲ್ಲಿ ದಾಖಲಾತಿಗಳ ಪರಿಶೀಲನೆ – ಆಯಾ ಕೇಂದ್ರಗಳಲ್ಲಿ ನಿಯೋಜಿಸಿದ ಸಮಿತಿ ಸದಸ್ಯರಿಂದ (ಆಯಾ ವಿಶ್ವವಿದ್ಯಾನಿಲಯಗಳು ನಿಯೋಜಿಸಿದ) – **ದಿನಾಂಕ 19-08-2020 ರಿಂದ ದಿನಾಂಕ 22-08-2020 ರ ವರೆಗೆ.**
3. ಕೃಷಿ ಕೋಟಾದಡಿ ಪರಿಗಣಿಸಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಎಲ್ಲಾ 15 ಕೇಂದ್ರಗಳಿಂದ ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರಿಗೆ **ದಿನಾಂಕ: 24-08-2020** ರೊಳಗೆ ಸಲ್ಲಿಸುವುದು.

ಆದೇಶದ ಮೇರೆಗೆ

ಕುಲಸಚಿವರು, ಕೃವಿವಿ ಬೆಂಗಳೂರು

ಕುಲಸಚಿವರು
ಕೃಷಿ ವಿಶ್ವವಿದ್ಯಾನಿಲಯ
ಗಾ ಕೃ.ವಿ.ಕೆ., ಬೆಂಗಳೂರು-560 065